**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ, ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ದುಗ್ಗಸಂದ್ರ ಹೋಬಳಿ, ಕೊಲದೇವಿ ಗ್ರಾಮದ ಸನಂ 5 ರಲ್ಲಿನ 2-00ಎ 38ಗು ಜಮೀನನ್ನು ಹದ್ದುಬಸ್ತು ಮಾಡಲು ದಿನಾಂಕ:14-8-2024ರಂದು ಅರ್ಜಿ ಸಲ್ಲಿಸಿದ್ದು, ಕಳೆದ 6 ತಿಂಗಳಿನಿಂದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗೆ ಸುತ್ತಾಡಿದರು ಸರ್ವೆ ಕಾರ್ಯ ಮಾಡಿರುವುದಿಲ್ಲ ಮತ್ತು ಮುಳಬಾಗಿಲು ತಹಶೀಲ್ದಾರ್ ರವರು ಸರ್ವೆ ನಂ 5 ರಲ್ಲಿನ ಜಮೀನು ಮಂಜೂರು ನೈಜತೆಯಿಂದ ಕೂಡಿದ್ದು, ಈ ಜಮೀನು ಹಿಡುವಳಿ ಜಮೀನಾಗಿದ್ದು, ನಿಯಮಾನುಸಾರ ಅಳತೆ ಮಾಡುವಂತೆ ದಿನಾಂಕ:26-9-2024ರಂದು ಆದೇಶಮಾಡಿ ಪತ್ರ ಬರೆದಿದ್ದರೂ ಸಹ ಹಾಗೂ ಮೌಖಿಕವಾಗಿ ಸೂಚಿಸಿದ್ದರೂ ಸಹ ಭೂದಾಖಲೆಗಳ ಸಹಾಯಕ ನಿರ್ದೇಶಕರು ಸರ್ವೆ ಕಾರ್ಯ ಮಾಡದೇ ವಿನಾಕಾರಣ ತೊಂದರೆ ಕೊಡುತ್ತಿದ್ದಾರೆ. ಈ ತಾಲ್ಲೂಕಿನ ಬಡ ರೈತರು ಸರ್ವೆ ಇಲಾಖೆಗೆ ಅಲೆದು ತೊಂದರೆ ಅನುಭವಿಸುತ್ತಿರುವುದರಿಂದ ಕೊಲದೇವಿ ಗ್ರಾಮದ ಸನಂ 5 ನ್ನು ಸೇರಿದಂತೆ ತಾಲ್ಲೂಕಿನಲ್ಲಿ ಬಾಕಿ ಇರುವ ಅರ್ಜಿಗಳ ಸರ್ವೆ ಕಾರ್ಯವನ್ನು ಕೈಗೊಳ್ಳುವ ಬಗ್ಗೆ.

**-: ಹೇಳಿಕೆ :-**

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ದುಗ್ಗಸಂದ್ರ ಹೋಬಳಿ, ಕೊಲದೇವಿ ಗ್ರಾಮದ ಸನಂ 5 ರಲ್ಲಿನ 2.38 ಎಕರೆ ಜಮೀನನ್ನು ತತ್ಕಾಲ್ ಪೋಡಿ ಮಾಡಲು ಶ್ರೀ ಕೆ.ಆರ್. ಮಂಜುನಾಥ ರವರು ದಿನಾಂಕ:14-08-2024 ರಂದು ಅರ್ಜಿ ಸಂಖ್ಯೆ:19110824394401ನ್ನು ಮೋಜಿಣಿ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಸರ್ವೆ ನಂ.5 ರಲ್ಲಿನ ಕರ್ದಾ ದಾಖಲೆಯನ್ನು ಪರಿಶೀಲಿಸಲಾಗಿ "**ಇನಾಂ ದಾರ ತಳವಾರ ಮುನಿಗ**" ಎಂದು ನಮೂದಾಗಿದ್ದು ಈ ಬಗ್ಗೆ ಇನಾಂ ಮಂಜೂರಾತಿ ಅದೇಶದ ನಕಲು ಮತ್ತು ಮಂಜೂರಾತಿ ನೈಜ್ಯತೆಯ ಬಗ್ಗೆ ತಹಶೀಲ್ದಾರ್, ಮುಳಬಾಗಿಲು ಇವರಿಂದ ವರದಿ ಕೋರಲಾಗಿದ್ದು, ಅದರಂತೆ ತಹಶೀಲ್ದಾರ್ ಮುಳಬಾಗಿಲು ತಾಲ್ಲೂಕು ರವರು ದಿನಾಂಕ 26-09-2024ರಂದು ಆರ್.ಆರ್.ಟಿ ಸಿಆರ್ 855/2024-25ರ ಪತ್ರದಲ್ಲಿ ಸನಂ.5 ಸರ್ಕಾರಿ ತಳಾರಿಯ ತಳಾಯಿ ರಾಮಯ್ಯ ಎಂದು ನಮೂದು ಇದ್ದು, ಮೂಲ ಇನಾಂತಿ ಜಮೀನಾಗಿದ್ದು, ಮಂಜೂರಿಯಂತೆ ನೈಜತೆಯಿಂದ ಕೂಡಿರುವುದಾಗಿ ಹಾಗೂ ಇನಾಂ ಮರು ಮಂಜೂರಾತಿ ಕಡತ ಲಭ್ಯ ಇರುವುದಿಲ್ಲವೆಂದು ಮೋಜಿಣಿ ಅಳತೆ ಕೆಲಸ ಪೂರೈಸಲು ಆದೇಶ ನೀಡಿರುತ್ತಾರೆ. ಸಂಬಂಧಿಸಿದ ಪೂರಕ ದಾಖಲೆ ಒದಗಿಸದೇ ಇದ್ದುದರಿಂದ, ದಾಖಲೆಗಳನ್ನು ಒದಗಿಸುವಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರು ರವರು ದಿನಾಂಕ:16-12-2024ರಂದು ತಹಶೀಲ್ದಾರ್ ಮುಳಬಾಗಿಲು ತಾಲ್ಲೂಕು ರವರನ್ನು ಕೋರಲಾಗಿ, ದಿನಾಂಕ: 10-03-2025ರಂದು ತಹಶೀಲ್ದಾರ್ ಕಛೇರಿಯಿಂದ, ಸರ್ವೆ ನಂ.5ರ ಪಹಣಿಯಲ್ಲಿ ತಳಾರಿ ಇನಾಂತಿ (ನೌಕರಿ ಮಾಡಿಕೊಂಡ ಅನುಭವ) ಎಂದು ನಮೂದಾಗಿದ್ದು 1. ಮುನಿವೆಂಕಟಮ್ಮ ಕೋಂ ತಿಪ್ಪಯ್ಯ 2. ವೆಂಕಟಮ್ಮ ಕೋಂ ತಿಪ್ಪಣ್ಣ ರವರಿಗೆ ಎಮ್.ಆರ್.ನಂ.325/-41/86-87ರಂತೆ ಖಾತೆಯಾಗಿದ್ದು, ತದ ನಂತರದ ಖಾತಾ ಬದಲಾವಣೆಯ ವಹಿವಾಟುಗಳನ್ನು ನಮೂದಿಸಿದೆ ಎಂದು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ವರದಿ ಸಲ್ಲಿಸಾಗಿರುತ್ತದೆ.

ಪ್ರಸ್ತುತ, ಸದರಿ ಪ್ರಕರಣವು ಎಲ್.ಆರ್.ಎಫ್ ಶಿರಸ್ತೆದಾರ್ ರವರ ಮೋಜಿಣಿ ಲಾಗಿನ್‌ನಲ್ಲಿ ಬಾಕಿ ಇದ್ದು, ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ ನಿಯಮಾನುಸಾರ ಅಳತೆ ಕೆಲಸ ಪೂರೈಸಿ ಹಿಸ್ಸಾ ಪೋಡಿ ಕ್ರಮ ಜರುಗಿಸಲಾಗುತ್ತದೆ.

**ಸಂಖ್ಯೆ: ಕಂಇ 48 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು